**CC 181/2017**

**ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರ.ದ.ನ್ಯಾದಂ. ಗಳ ನ್ಯಾಯಾಲಯ,**
**ಹೊಸಪೇಟೆ.**

**ಸಿಸಿ ನಂಬರ್ 181/2017**

**ಸಿ ಡಬ್ಲ್ಯೂಃ 2**
**ಪಿ ಡಬ್ಲ್ಯೂಃ 2**

ಸಾಕ್ಷಿಯ ಹೆಸರು - ಚಂದ್ರಶೇಖರ
ತಂದೆಯ ಹೆಸರು - ಲೇಟ್ ಎಂ ರಾಜು
ವಯಸ್ಸು - 40 ವರ್ಷಗಳು
ಉದ್ಯೋಗ - ಟ್ರಾವೆಲ್ ಏಜೆನ್ಸಿ
ವಾಸಸ್ಥಳ - ಹೊಸಪೇಟೆ

**ಸಾಕ್ಷಿಯನ್ನು ದಿನಾಂಕಃ 07-11-2022 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ**

ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿ ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿದ್ದು, ಆ ದಾಖಲೆಯನ್ನು ಈಗಾಗಲೇ ನಿಪಿಃ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 3 (ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸುಮಾರು 5 – 6 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಾನು ಬೇರೆ ಕೆಲಸಕ್ಕೆ ಹೋದಾಗ ನಿಪಿಃ 3 ಕ್ಕೆ ಸಹಿ ಪಡೆದುಕೊಂಡಿರುತ್ತಾರೆ. ನಿಪಿಃ 3 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಿಪಿಃ 3 ಕ್ಕೆ ಸಹಿ ಹಾಕುವಾಗ ನ್ಯಾಯಾಲಯದ ಮುಂದಿರುವ ಆರೋಪಿ ಇದ್ದನು. ನನ್ನ ಸಮಕ್ಷಮ ಯಾವುದೇ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ. ನನ್ನ ಜೊತೆ ಚಾಸಾ - 3 ರವರು ಇದ್ದರು.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಎ.ಪಿ.ಪಿ. ಅವರು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)**

**CC 181/2017**

**ಸಿ ಡಬ್ಲೂಃ 2**

**ಪಿ ಡಬ್ಲೂಃ 2**

**ಪಾಟೀ ಸವಾಲು ಮಾನ್ಯ ಎ ಪಿ ಪಿ ಅವರಿಂದಃ**

ದಿಃ 11-06-2016 ರಂದು ನನ್ನನ್ನು ಹಾಗೂ ಚಾಸಾ - 3 ರವರನ್ನು ಪಟ್ಟಣ ಪೋ. ಠಾಣೆಯಲ್ಲಿ ಪಂಚರಾಗಿ ಕರೆದರು ಅಂದರೆ ಸರಿ. ಆಗ ಪಿ ಆಯ್ ಅವರ ಕಚೇರಿಯಲ್ಲಿ ಅಲ್ಲಿದ್ದ ಆರೋಪಿ ತನ್ನ ಮೂಲ ದಾಖಲಾತಿಗಳನ್ನು ಪಾಸ್ ಪೋರ್ಟ ಪಡೆಯುವ ಸಲುವಾಗಿ ಹಾಗೂ ಆತನ ಕೆಲವೊಂದು ಮೂಲ ದಾಖಲೆಗಳನ್ನು ಮತ್ತು ಬೇರೆ ದಾಖಲೆಗಳನ್ನು ಹಾಜರುಪಡಿಸಿದ್ದು ಒಂದು ಆಧಾರ ಕಾರ್ಡ, ಓರಿಯಂಟಲ್ ಬ್ಯಾಂಕ್ ನ ಅಜಾಸ್ ಹೆಸರಿನಲ್ಲಿರುವ ಪಾಸ್ ಬುಕ್, ಅಜಾಸ್ ಅಹ್ಮದ್ ಹೆಸರಿನ ಜನನ ಪ್ರಮಾಣ ಪತ್ರ, ಅಜಾಸ್ ಅಹ್ಮದ್ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಇವುಗಳನ್ನು ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಜಪ್ತು ಪಡಿಸಿ ನನಗೆ ಓದಿ ಹೇಳಿ ಪಂಚನಾಮೆಗೆ ಸಹಿ ಪಡೆದುಕೊಂಡರು ಅಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ** ಇಲ್ಲಾ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.